ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 25-03-2021 ಪ್ರಶ್ನೆ ಸಂಖ್ಯೆ : 1818 (2195)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 25-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ಬೆಂಗಳೂರು ನಗರಕ್ಕೆ ಮೂಲ ಸೌಕರ್ಯಗಳನ್ನು ಒದಗಿಸುವ ಬಗ್ಗೆ

(ಅ) 2018-19ನೇ ಸಾಲಿನಲ್ಲಿ ಕೆ.ಎಸ್.ಎಫ್.ಸಿ. ವತಿಯಿಂದ ಕೆ.ಐ.ಎ.ಡಿ.ಬಿ ಕೈಗಾರಿಕಾ ನಿವೇಶನ ಗುತ್ತಿಗೆ ಪಡೆಯಲು 31 ಘಟಕಗಳ ಪೈಕಿ 25 ಉದ್ದಿಮೆದಾರರಿಗೆ ನಿವೇಶನ ಪಡೆಯಲು ಹಣವನ್ನು ವಿತರಿಸಲಾಗಿದ್ದು, ಬಾಕಿ 06 ಉದ್ದಿಮೆದಾರರಿಗೆ ಹಣ ವಿತರಿಸಲಾಗಿದೆಯೇ; ಹಾಗಿದ್ದಲ್ಲಿ, ಸಂಪೂರ್ಣ ವಿವರವನ್ನು ಒದಗಿಸುವುದು; ಇಲ್ಲದಿದ್ದಲ್ಲಿ ಕಾರಣವೇನು ;

(ಆ) ಮೊದಲನೆ ಕಂತು ಬಿಡುಗಡೆ ಮಾಡುವುದರಲ್ಲಿ ತಾರತಮ್ಯ ಮಾಡಲಾಗಿದೆ ಎಂಬ ಆರೋಪ ಕೇಳಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?